### ನೀರೇಕೆ ಬಿಸಿಯಾಗದು?

ಗುಂಡ: ಸಂಗೀತದಲ್ಲಿ ಎಷ್ಟೊಂದು ಶಕ್ತಿಯಿದೆಯೆಂದರೆ ಅದರಿಂದ ನೀರನ್ನು ಕೂಡಾ ಬಿಸಿಯಾಗಿಸಲು ಸಾಧ್ಯವಂತೆ, ಗೊತ್ತೆ ನಿನಗೆ?

ಗುಂಡನ ಪತ್ನಿ: ಗೊತ್ತು ಕಣ್ರೀ, ನಿಮ್ಮ ಹಾಡು ಕೇಳಿ ನನ್ನ ರಕ್ತ ಕುದಿಯಬಹುದಾದರೆ ಯಃಕಶ್ಚಿತ್ ನೀರೇಕೆ ಬಿಸಿಯಾಗಲಾರದು?

* * *



### ಮೈ ಲಾರ್ಡ್

ನ್ಯಾಯಾಧೀಶರು: ನೀನು ಸಮಾಜಕ್ಕಾಗಿ ಏನಾದರೂ ಒಳ್ಳೆಯ ಕೆಲಸ ಮಾಡಿರುವೆಯಾ?

ಕೈದಿ ಗುಂಡ: ನನ್ನಂಥವರಿಂದಾಗಿಯೇ ಪೊಲೀಸ್ ಇಲಾಖೆ ಮತ್ತು ನ್ಯಾಯಾಲಯಗಳಲ್ಲಿ ಲಕ್ಷಾಂತರ ಮಂದಿಗೆ ಉದ್ಯೋಗಾವಕಾಶ ಲಭಿಸಿದೆ ತಾನೇ ಮೈ ಲಾರ್ಡ್?

★ (ಸಂ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ

### ನಾನೇನು ಮಾಡಲಿ?

ಹೆಂಡತಿ: ಏನ್ರೀ, ನನಗೆ ಹೊಸ ಸೀರೆ ಕೊಡಿಸಿ.

ಗಂಡ: ಹೊಸ ಸೀರೆ ಕೊಡಿಸಿ ಇನ್ನೂ ಒಂದು ವಾರವೂ ಆಗಿಲ್ಲ. ಆಗಲೇ ಇನ್ನೊಂದು ಬೇಕಾ?

ಹೆಂಡತಿ: ಆ ಹೊಸ ಸೀರೆನಾ ಫಂಕ್ಷನ್‌ನಲ್ಲಿ ಎಲ್ಲಾ ನೆಂಟರು ನೋಡಿದ್ದಾರೆ. ಅಕ್ಕಪಕ್ಕದವರು ನೋಡಿದ್ದಾರೆ. ಅದಕ್ಕೆ ಹೊಸ ಸೀರೆ ಬೇಕೇ ಬೇಕು.

ಗಂಡ: ನಿನ್ನನ್ನು ಕೂಡ ನನ್ನ ನೆಂಟರಿಷ್ಟರು, ಸ್ನೇಹಿತರು ನೋಡಿದ್ದಾರಲ್ಲ, ನಾನೇನು ಮಾಡಲಿ?

★(ಸಂ) ಬಿ.ಎಸ್. ರಾಜಲಕ್ಷ್ಮಿ

### ನನಗೇನಂತೆ ಬಿಡು!

ಅಜ್ಜಿ ಆಕೆಯ ಮಗ, ಮೊಮ್ಮಗಳು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಮಗ ಪೇಪರು ಓದುವುದರಲ್ಲಿ ತಲ್ಲೀನನಾಗಿದ್ದಾಗ ಮಗಳು 'ಅಪ್ಪಾ ಈಗ ತಾನೇ ರೈಲು ನಿಂತಿತ್ತಲ್ಲ ಆ ಸ್ಟೇಶನ್‌ನ ಹೆಸರೇನಪ್ಪ' ಅಂತ ಕೇಳಿದಳು. ಪೇಪರ್ ಓದುವಲ್ಲಿ ಭಂಗ ಬಂದಿದ್ದಕ್ಕೆ ಅಪ್ಪ ರೇಗಿ– 'ಯಾವುದಾದರೇನಂತೆ ಕೆಲಸಕ್ಕೆ ಬಾರದ ಪ್ರಶ್ನೆ ಕೇಳಿ ನನ್ನ ಡಿಸ್ಟರ್ಬ್ ಮಾಡಬೇಡ' ಅಂತ ಗದರಿಸಿದ.

ಹುಡುಗಿ: 'ಸರಿ ನನಗೇನಂತೆ ಆ ಸ್ಟೇಶನ್‌ನಲ್ಲೇ ಅಜ್ಜಿ ನೀರು ತರೋದಕ್ಕೆ ಚೊಂಬು ತಗೊಂಡು ಇಳಿದು ಹೋಗಿದ್ದಳು, ಬರಲೇ ಇಲ್ಲ ಅದಕ್ಕೆ ಕೇಳಿದೆ. ನನಗೇನಂತೆ ಬಿಡು' ಎಂದು ಮುಖ ತಿರುಗಿಸಿದಳು.

★ (ಸಂ) ಜೆ.ಜೆ. ದೊಡ್ಡಮನಿ, ವಿಜಯಪುರ




